'ಯಾಕಪ್ಪಾ ಮಗು, ಮಲಗಿದ್ದೀಯಾ
ಪಿಳಿ ಪಿಳಿ ನೋಡುತ್ತಾ?'
'ತಾತ, ಈ ಅಮ್ಮ ಎಲ್ಲಿಂದ ತಂದಳೋ
ಇಂಥಾ ಸಿಹಿ ಮುತ್ತ!'

ಎನ್ನುವಂಥ ವೃದ್ಧಾಪ್ಯದ ಪ್ರಬುದ್ಧತೆಯನ್ನು ದಿಗಿಲಿಗೆ ದೂಡುವ ಬಲು ಸಹಜದ ಬಾಲ್ಯದ ಮುಗ್ಧ ದನಿ ಅಲ್ಲಿ ಕೇಳುತ್ತದೆ.

'ತಾವರೆ ಎಲೆಯ ತೊಟ್ಟಿಲಿನಲ್ಲಿ
ಮಕ್ಕಳು ಮಲಗಿವೆ ಹೊತ್ತಾಗಿ;
ಇಷ್ಟೂ ಹೊತ್ತು ವಟರ್ ವಟರ್ ಎಂದು
ಜೋಗುಳ ಹಾಡೀ ಸುಸ್ತಾಗಿ'

ಎಂದು ಬೆಳ್ಳ ಬೆಳದಿಂಗಳಿನಲ್ಲಿ ವಾಕಿಂಗ್ ಹೊರಟಿರುವ ಒಳ್ಳೇ ಜಾಲಿ ಮೂಡಿನ ಕಪ್ಪೆಯನ್ನ ಅಲ್ಲಿ ಸಂಧಿಸಬಹುದು! ನೂರು ಜನ ಹೊತ್ತೊಯ್ಯುವ ಕುಂಬಳಕಾಯಿಯನ್ನ ಕೊಂಡು ತಂದು ಒಂದುವಾರ ಕಾಲ ಅದನ್ನು ಪಳಿದ್ಯ ಮಾಡಿ, ಒಂದೇ ಊಟದಿ ಖಾಲಿಮಾಡಿ ಮಲಗಿದ ದೊರೆಯ ಪ್ರಸಂಗ ಅಲ್ಲಿದೆ!

'ತಕ್ಕಡಿ ಗಿಕ್ಕಡಿ ಪಕ್ಕಾ ಉಂಟ?'
'ಮೋಸಕೆ ದೇವ್ರು ಮೆಚ್ಚೋಕುಂಟ?'
'ತಗೋ ತಕ್ಕಡಿ, ಮತ್ತೆ ಒಳ್ಳೇ ರೇಟು'

ಅಂತೆಲ್ಲಾ ಒಳ್ಳೇ ಜಿಕೇರಿ ಮಾಡಿ 'ತೂಗು, ಇವಿಷ್ಟೇ ಹಳೆ ಬಸ್ ಟಿಕೇಟು' ಅಂತ ತಾನು ಜತನದಿಂದ ಕೂಡಿಟ್ಟಿದ್ದ ಬಸ್ ಟಿಕೆಟ್‌ಗಳನ್ನ ಮುಂದೆ ಸುರುವಿ ನಿಂತ ಪುಟ್ಟನನ್ನ ಅಲ್ಲಿ ನೀವು ತಪ್ಪದೇ ಕಂಡೇ ಕಾಣುತ್ತೀರಿ.

ಅವರ 'ಕುಂಭಕರ್ಣನ ನಿದ್ದೆ'ಯಂತೂ ಕನ್ನಡ ಮಕ್ಕಳ ಕಥನ ಕವಿತೆಗಳ ಲೋಕಕ್ಕೆ ಒಂದು ಬಲು ಸೊಗಸಿನ ಸೇರ್ಪಡೆ. ರಾವಣ ರಾಮನೆದುರು ಕಾದುತ್ತ ತನ್ನೆಲ್ಲ ಉಪಾಯಗಳ ಬತ್ತಳಿಕೆ ಖಾಲಿಯಾಗುತ್ತ, ಕೈಹೊಸಕುತ್ತಾ, ಕುಂಭಕರ್ಣನನ್ನ ಎಬ್ಬಿಸುವ ತುರ್ತನ್ನ ಭಾವಿಸಿದಾಗ, ಸೀತಾಮಾತೆಯ ಕದ್ದು ಅಶೋಕವನದಲ್ಲಿಟ್ಟಿದ್ದು, ರಾಮ–ವಾನರ ಸೈನ್ಯ ಕಟ್ಟಿಕೊಂಡು ಯುದ್ಧಕ್ಕೆ ಬಂದದ್ದು, ಯಾವುದರ ಪರಿವೆಯೂ ಇಲ್ಲದೆ ಆರುತಿಂಗಳಿಂದ ನಿರಾಳ ಗಾಢ ನಿದ್ರೆಯಲ್ಲಿದ್ದ ಅವನನ್ನ ಎಬ್ಬಿಸುವಲ್ಲಿ ಪಡುವ ಪಡಿಪಾಟಲೇ ಇಡೀ ರಚನೆಗೆ ಸ್ಫೂರ್ತಿ. ಸಹಜವಾಗಿಯೇ ನಕ್ಕು ನಗಿಸುವ ಹೂರಣದ ದಾರಿ ಉಡುಪರದು. ಹಾಸ್ಯದ ಎಷ್ಟೆಲ್ಲ ಚಹರೆಗಳನ್ನ ಅವರು ತರಲು ನೋಡಿರುವ ನೀಳ್ಗವನದಲ್ಲಿ, 10 ಸಾಲುಗಳಾಗಿ ಪದ್ಯವಿಭಾಗವಾಗಿರುವ ರಚನೆಯನ್ನು ಓದುತ್ತಲೇ ಅನುಭವಿಸಬೇಕು.

ಹಕ್ಕಿಯ ತುಪ್ಪಳ ಹಾಸಿಗೆಯಲ್ಲಿ
ಬೆಟ್ಟದಂತಹ ದೇಹವ ಚೆಲ್ಲಿ,
ನಿದ್ರಿಸುತಿದ್ದ ಆ ಮಹರಾಯ!
ಎಚ್ಚರವಾದರೆ ಬಹಳ ಅಪಾಯ!